

بسم اللهِ الرّحمٰنِ الرّحیم

**ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅವರ ಶುಕ್ರವಾರ ಖುತುಬದ ಸಾರಾಂಶ** – 07.03.2014

# ಲಂಡನ್: ಜಾಗತಿಕ ಸರ್ವಧರ್ಮ ಸಮ್ಮೇಳನ– 2014

ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:

ಅಂದಾಜು ಮೂರು ವಾರಗಳ ಹಿಂದೆ ಯುನೈಟೆಡ್ ಕಿಂಗ್‌ಡಮ್‌ನ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಬ್ರಿಟನಿನಲ್ಲಿ ಒಂದು ನೂರು ವರ್ಷಗಳನ್ನು ಪೂರ್ಣಗೊಳಿಸಿದ ಪ್ರಯುಕ್ತ ಒಂದು ಸಮಾರಂಭವನ್ನು ವ್ಯವಸ್ಥೆಗೊಳಿಸಿತ್ತು. ಅದರಲ್ಲಿ ಭಾಗವಹಿಸಲು ವಿವಿಧ ಧರ್ಮಗಳ ವಿದ್ವಾಂಸರಿಗೆ ಅಥವಾ ಪ್ರತಿನಿಧಿಗಳಿಗೆ ಆಹ್ವಾನ ನೀಡಲಾಗಿತ್ತು. ಅವರು ತಮ್ಮ ತಮ್ಮ ಪವಿತ್ರ ಗ್ರಂಥಗಳನ್ನು ಆಧಾರವಾಗಿಟ್ಟುಕೊಂಡು ದೇವನ ಬಗ್ಗೆ ಮತ್ತು ಧರ್ಮದ ಬಗ್ಗೆ ತಮ್ಮ ಕಲ್ಪನೆಗಳನ್ನು ವಿಶದೀಕರಿಸಬೇಕೆಂದು ಅಪೇಕ್ಷಿಸಲಾಗಿತ್ತು. ಈ ಇಪ್ಪತ್ತೊಂದನೆಯ ಶತಮಾನದಲ್ಲಿ ದೇವನ ಕೃತ್ಯಗಳು ಮತ್ತು ಅವನ ಆವಶ್ಯಕತೆ ಏನಿದೆ ಎಂಬುದನ್ನು ವಿವರಿಸಲು ಕೋರಲಾಗಿತ್ತು. ಆ ಸಮಾರಂಭದಲ್ಲಿ ಇಸ್ಲಾಮ್ ಧರ್ಮದ ಪ್ರತಿನಿಧಿಯಾಗಿ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಭಾಗವಹಿಸುವುದರೊಂದಿಗೆ ಯಹೂದಿ, ಕ್ರೈಸ್ತ, ಬೌಧಮತ, ಹಿಂದೂಧರ್ಮ, ಮೊದಲಾದ ಧರ್ಮಗಳ ಪ್ರತಿನಿಧಿಗಳು ಸಹ ಭಾಗವಹಿಸಿ ತಮ್ಮ ವಿಚಾರಗಳನ್ನು ವಿವರಿಸಿದರು. ಝೊರಾಸ್ಟರ್ ಮತ್ತು ಸಿಖ್ ಮತಗಳ ಪ್ರತಿನಿಧಿಗಳು ಸಹ ಭಾಗವಹಿಸಿದ್ದರು. ಬಹಾಯಿ, ಮೊದಲಾದವರು ಕೂಡ ಅಲ್ಲಿ ಹಾಜರಿದ್ದರು.

ಕೆಲವು ರಾಜಕಾರಣಿಗಳಿಗೆ ಮತ್ತು ಹ್ಯೂಮನ್‌ರೈಟ್ಸ್ ಪ್ರತಿನಿಧಿಗಳಿಗೆ ಸಹ ತಮ್ಮ ಅಭಿಪ್ರಾಯಗಳನ್ನು ತಿಳಿಸಲು ಸಂದರ್ಭ ನೀಡಲಾಗಿತ್ತು. ಈ ಸಮಾರಂಭ ಇಲ್ಲಿನ ಅತ್ಯಂತ ದೊಡ್ಡದೂ ಪಾರಂಪರಿಕ ಮಹತ್ವವುಳ್ಳದ್ದೂ ಆಗಿರುವ ಗಿಲ್ಡ್ ಹಾಲ್‌ನಲ್ಲಿ ಏರ್ಪಡಿಸಲಾಗಿತ್ತು. ಈಗ ನಾನು ಈ ಸಮಾರಂಭದ ಬಗ್ಗೆ ವಿವರಣೆ ನೀಡಲು ಉದ್ದೇಶಿಸುತ್ತೇನೆ. ಜನರು ಖುತುಬಗಳನ್ನು ಹೆಚ್ಚು ಆಸಕ್ತಿಯಿಂದ ಆಲಿಸುವುದರಿಂದ ಈ ಸಮಾರಂಭದ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸುತ್ತೇನೆ. ಆದರೆ ಈ ಸಮಾರಂಭದ ವಿಸ್ತೃತ ವರದಿ MTA ದಲ್ಲಿ ಬಿತ್ತರಿಸಲ್ಪಡುವಾಗ ಅದನ್ನು ವೀಕ್ಷಿಸಿ ಅಹ್ಮದಿಯರು ಅದರಿಂದ ಪ್ರಯೋಜನ ಪಡೆಯಬಹುದಾಗಿದೆ. ವಿವಿಧ ಧರ್ಮಗಳ ಪ್ರತಿನಿಧಿಗಳ ವಿಚಾರಗಳನ್ನು ಸಂಕ್ಷಿಪ್ತವಾಗಿ ವಿವರಿಸುತ್ತೇನೆ.

ಹಿಂದೂ ಕೌನ್ಸಿಲ್ ಚೆಯರ್‌ಮ್ಯಾನ್ ಆಗಿರುವ ಉಮೇಶ್ ಚಂದರ್ ಶರ್ಮಾ ಹೀಗೆ ಹೇಳಿದರು: ಇಲ್ಲಿ ನಡೆಯಲಿರುವ ವಿಚಾರಗೋಷ್ಠಿಯ ವಿಷಯ ಬಹಳ ಆಸಕ್ತಿದಾಯಕವಾಗಿದೆ. ಈ ವಿಶ್ವವನ್ನು ನಿರ್ಮಿಸಿದ ಒಬ್ಬ ಸೃಷ್ಟಿಕರ್ತನಿದ್ದಾನೆಂಬುದರ ಬಗ್ಗೆ ನಾವೆಲ್ಲರೂ ಒಮ್ಮತ ಹೊಂದಿದ್ದೇವೆ ಎಂದು ಇದರಿಂದ ಸಾಬೀತಾಗುತ್ತದೆ. ಇನ್ನೊಂದು ವಿಷಯವೇನೆಂದರೆ ರಾಜಕೀಯ ಧುರೀಣರು ಮತ್ತು ಇತರ ಸಂಸ್ಥೆಗಳು ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ಶಕ್ತರಾಗಿಲ್ಲ. ಎಲ್ಲಾ ಕಡೆಗಳಲ್ಲೂ ಜಗಳಗಳೂ ಅಸ್ತವ್ಯಸ್ತತೆಗಳೂ ವ್ಯಾಪಿಸಿವೆ. ರಾಜಕಾರಣಿಗಳ ಬಗ್ಗೆ ಜನರ ನಂಬಿಕೆ ಕೊನೆಗೊಂಡಿದೆ. ಆದುದರಿಂದ ನನ್ನ ಅಭಿಪ್ರಾಯವೇನೆಂದರೆ ನಾವು ಮಾನವೀಯತೆಯ ಒಳಿತಿಗೋಸ್ಕರ ಪುನಃ ಧರ್ಮದ ಕಡೆಗೆ ತಿರುಗಬೇಕಾಗಿದೆ.

ಅನಂತರ ದಲಾಯಿಲಾಮರ ಸಂದೇಶವನ್ನು ಲಂಡನ್‌ನಲ್ಲಿರುವ ಬೌದ್ಧ ಧರ್ಮದ ಪ್ರತಿನಿಧಿ ಓದಿ ಹೇಳಿದರು. ದಲಾಯಿಲಾಮ ಆ ಸಂದೇಶದಲ್ಲಿ ಹೀಗೆ ಹೇಳಿದರು: ಅಹ್ಮದಿಯಾ ಮುಸ್ಲಿಮ್ ಜಮಾಅತ್ 2014 ಫೆಬ್ರವರಿಯಲ್ಲಿ ಜಾಗತಿಕ ಧಾರ್ಮಿಕ ಸಮ್ಮೇಳನ ಜರುಗಿಸಲು ಧೈರ್ಯ ಪೂರ್ವಕವಾಗಿ ನಿರ್ಧರಿಸಿದ ಬಗ್ಗೆ ನಾನು ಮೆಚ್ಚಿಗೆ ಸೂಚಿಸುತ್ತೇನೆ. ಇಂತಹ ಸಮ್ಮೇಳನಗಳು ಬಹಳ ದೂರಗಾಮಿ ಪರಿಣಾಮಗಳನ್ನು ಬೀರುತ್ತವೆ ಎಂದು ನಾನು ನಂಬಿದ್ದೇನೆ.

ಅನಂತರ ಡ್ರೂಸ್ ಪಂಥದ ನಾಯಕ ಶೇಖ್ ಮೂಫಿಖ್ ಸಾಹಿಬ್ ಹೀಗೆ ಹೇಳಿದರು: ನನ್ನನ್ನು ಈ ಸಮ್ಮೇಳನಕ್ಕೆ ಆಮಂತ್ರಿಸಿದ ಅಹ್ಮದಿಯಾ ಜಮಾಅತ್ ಇಮಾಮ್‌ರಿಗೂ ಅಹ್ಮದಿಯಾ ಜಮಾಅತ್‌ಗೂ ನಾನು ಕೃತಜ್ಞತೆ ಅರ್ಪಿಸುತ್ತೇನೆ. ಅಹ್ಮದಿಯಾ ಜಮಾಅತ್ ಬ್ರಿಟನಿನಲ್ಲಿ ಒಂದು ನೂರು ವರ್ಷವನ್ನು ಪೂರೈಸಿದ ಬಗ್ಗೆ ಸಂತೋಷ ಪ್ರಕಟಿಸಲು ಏರ್ಪಡಿಸಿರುವ ಈ ಭವ್ಯ ಸಮ್ಮೇಳನಕ್ಕೆ ನಾನು ಶುಭಾಶಂಸೆಗಳನ್ನು ಕೋರುತ್ತೇನೆ. ನಮ್ಮ ಡ್ರೂಸ್ ಪಂಥವು ಪವಿತ್ರ ಭೂಪ್ರದೇಶದಲ್ಲಿ ಅಹ್ಮದಿಯಾ ಜಮಾಅತ್‌ನೊಂದಿಗೆ ಬಹಳ ಸ್ನೇಹಪೂರ್ಣ ಸಂಬಂಧವನ್ನು ಹೊಂದಿರುತ್ತದೆ. ನೀವು ನಮ್ಮನ್ನು ಆಮಂತ್ರಿಸಿದ್ದಕ್ಕೆ ಸಂತೋಷಪಡುತೇವೆ. ಬನ್ನಿರಿ ನಾವೆಲ್ಲರೂ ಸೇರಿ ದೌರ್ಜನ್ಯವನ್ನೂ ಹಿಂಸಾಚಾರವನ್ನೂ ಖಂಡಿಸೋಣ. ನಾವು ಪ್ರೀತಿಯ ಬೀಜ ಬಿತ್ತೋಣ. ಅವುಗಳಿಂದ ಪೂರ್ವದ ದೇಶಗಳಲ್ಲಿ ಮಾತ್ರವಲ್ಲ ಸಂಪೂರ್ಣ ವಿಶ್ವದಲ್ಲಿ ಪ್ರೀತಿಯ ಕಾರಂಜಿಗಳು ಹೊರಹೊಮ್ಮಿ ಹರಿಯಲಿ.

ಕೆಥೋಲಿಕ್ ಚರ್ಚ್ ಬಿಷಪರಾದ ಕೆಮನ್ ಮೆಕ್ ಡೊನಾಲ್ಡ್ ಹೀಗೆಂದರು: ಜಾಗತಿಕ ಧಾರ್ಮಿಕ ಸಮ್ಮೇಳನದಲ್ಲಿ ಭಾಗವಹಿಸಿ ಕೆಥೋಲಿಕ್ ಚರ್ಚ್ ಪ್ರತಿನಿಧಿಯಾಗಿ ಭಾಷಣ ಮಾಡಲು ಅವಕಾಶ ಲಭಿಸಿದ ಕಾರಣ ನನಗೆ ಅತ್ಯಂತ ಹೆಚ್ಚು ಸಂತೋಷವಾಗಿದೆ. ಈಗ ಇಂತಹ ಸಮ್ಮೇಳನಗಳನ್ನು ಜರಗಿಸುವ ಆವಶ್ಯಕತೆ ಅತ್ಯಂತ ಹೆಚ್ಚಾಗಿದೆ. ಅನಂತರ ಬಿಷಪರು ಪೋಪ್ ಗುರುಗಳ ಕ್ಯಾಬಿನಟ್ ಪ್ರೆಸಿಡೆಂಟ್ ಆಗಿರುವ ಕಾರ್ಡಿನಲ್ ಪೀಟರ್ ಟರ್ಕ್‌ಸನ್‌ರ ಸಂದೇಶ ಓದಿ ಹೇಳಿದರು.

ಕೆಲವು ರಾಜಕೀಯ ನಾಯಕರ ಸಂದೇಶಗಳು ಮತ್ತು ಭಾಷಣಗಳು ಸಹ ಇದ್ದವು. ಘಾನ ದೇಶದ ಅಧ್ಯಕ್ಷರ ಸಂದೇಶವನ್ನು ಆ ದೇಶದ ರಾಯಭಾರಿ ಓದಿ ಹೇಳಿದರು.

ಬೆರೋನೆಸ್ ಸಯೀದ ವಾರ್ಸಿ ಸಾಹೇಬ್ ಈ ಸಮ್ಮೇಳನಕ್ಕೆ ಆಗಮಿಸಿದ್ದರು. ಅವರು ಹೀಗೆ ಹೇಳಿದರು: ಈ ಭವ್ಯ ಸಭಾಭವನದಲ್ಲಿ ಜಾಗತಿಕ ಸರ್ವಧರ್ಮ ಸಮ್ಮೇಳನಕ್ಕೆ ಆಗಮಿಸಿದ ಗಣ್ಯ ಅತಿಥಿಗಳ ಮುಂದೆ ನನ್ನ ವಿಚಾರಗಳನ್ನು ಪ್ರಕಟಿಸಲು ನನಗೆ ಸಂದರ್ಭ ದೊರೆತುದುದು ನನಗೆ ಗೌರವಾರ್ಹವಾಗಿದೆ. ಈ ಸಮ್ಮೇಳನವು ಅಹ್ಮದಿಯಾ ಜಮಾಅತಿನ ಉನ್ನತ ಆದರ್ಶ, ವಿಶಾಲ ಹೃದಯ, ದೂರದೃಷ್ಟಿ

ಮತ್ತು ಉನ್ನತ ಮಟ್ಟದ ನಡೆವಳಿಕೆಗಳ ಕನ್ನಡಿಯಾಗಿದೆ. ನೀವು ಜಾಗತಿಕ ಮಟ್ಟದ ಎಂತಹ ಸಮ್ಮೇಳನ ಏರ್ಪಡಿಸಿರುವಿರೆಂದರೆ ನೀವು ನಿಮ್ಮ ಧಾರ್ಮಿಕ ನಂಬಿಕೆಗಳನ್ನು ಮಾತ್ರ ಜನರ ಮುಂದಿರಿಸುವುದಕ್ಕೆ ಬದಲಾಗಿ ಎಲ್ಲಾ ಧರ್ಮಗಳ ಪ್ರತಿನಿಧಿಗಳಿಗೆ ತಮ್ಮ ತಮ್ಮ ವಿಚಾರಗಳನ್ನು ಜನರ ಮುಂದಿರಿಸಲು ಆಮಂತ್ರಣ ನೀಡಿರುವಿರಿ. ಬ್ರಿಟನಿನಲ್ಲಿ ಎಲ್ಲಾ ಪ್ರದೇಶಗಳಲ್ಲೂ ಮಾನವೀಯ ಸೇವೆಯ ದೃಷ್ಟಿಯಿಂದ ಅಹ್ಮದಿಯಾ ಜಮಾಅತ್ ಮಾಡಿದ ಉದಾರ ಸೇವೆಗಳ ಪರಿಣಾಮಗಳನ್ನು ನಮಗೆ ಕಾಣಬಹುದಾಗಿದೆ. ಈ ಸಮ್ಮೇಳನ ಯಶಸ್ವಿಯಾಗಿ ಜರಗಿಸಲಾದ ಕಾರಣ ಹೀಗೆ ಸಾಬೀತಾಗುತ್ತದೆ: ಲೋಕದ ಎಲ್ಲಾ ಧರ್ಮಗಳು ಒಟ್ಟಿಗೆ ಸೇರಿ ಕುಳಿತುಕೊಂಡು ಅಂತರ್ ಧರ್ಮೀಯ ಸಮನ್ವಯತೆಯ ಕಡೆಗೆ ಹೆಜ್ಜೆ ಹಾಕಲು ಸಿದ್ಧವಾಗಿವೆ. ಈ ಸಮ್ಮೇಳನದಲ್ಲಿ ಭಾಗವಹಿಸಲು ಸಾಧ್ಯವಾದುದು ನನಗೆ ಬಹಳ ಹೆಮ್ಮೆಯ ವಿಷಯವಾಗಿದೆ.

ಅಮೇರಿಕದ ಕಮಿಶನ್ ಆನ್ ಇಂಟರ್‌ನೇಶನಲ್ ರಿಲೀಜಿಯಸ್ ಫ್ರೀಡಮ್ ಇದರ ವೈಸ್ ಚೆಯರ್‌ಮೇನ್ ಡಾಕ್ಟರ್ ಕೆಟ್ರಿನಾ ಆಗಮಿಸಿದ್ದರು. ಅವರೊಂದಿಗೆ ನಮ್ಮ ಜಮಾಅತ್ ದೀರ್ಘ ಕಾಲದಿಂದ ಸಂಪರ್ಕ ಸ್ಥಾಪಿಸಿದೆ. ಅವರು ಹೀಗೆ ಹೇಳಿದರು: ನಿಮ್ಮೊಂದಿಗೆ ಈ ಸಮ್ಮೇಳನದಲ್ಲಿ ಭಾಗವಹಿಸಲು ಸಾಧ್ಯವಾದುದಕ್ಕೆ ನನಗೆ ಬಹಳ ಸಂತೋಷವಾಗಿದೆ. ನಾನು ಗೌರವಿಸಲ್ಪಟ್ಟಿರುವೆನು. ಬ್ರಿಟನ್‌ನಲ್ಲಿ ನಿಮ್ಮ ಜಮಾಅತ್ ಸ್ಥಾಪನೆಗೊಂಡು ನೂರು ವರ್ಷ ಪೂರ್ಣಗೊಂಡ ಬಗ್ಗೆ ಈ ಸಮ್ಮೇಳನ ಜರುಗಿಸಲಾಗಿದ್ದು ಅದರಲ್ಲಿ ನಾನು ಭಾಗವಹಿಸುತ್ತಿದ್ದೇನೆ. ಈ ಸಮ್ಮೇಳನ ಪರಸ್ಪರ ಸೌಹಾರ್ದ ಸಂಬಂಧ ಮತ್ತು ಧಾರ್ಮಿಕ ಸ್ವಾತಂತ್ರ್ಯಗಳ ಉನ್ನತ ಮಟ್ಟವನ್ನು ಗುರುತಿಸಲು ಜರುಗಿಸಲಾಗಿದೆ. ಇವುಗಳೇ ನಿಮ್ಮ ಜಮಾಅತಿನ ಮೂಲಭೂತ ಸಿದ್ಧಾಂತಗಳಾಗಿವೆ.

ಬ್ರಿಟನಿನ ಪ್ರಧಾನ ಮಂತ್ರಿಯ ಸಂದೇಶವನ್ನು ಅಟಾರ್ನಿ ಜನರಲ್ ರೈಟ್ ಆನರೇಬಲ್ ಡೊಮೆನಿಕ್ ಕ್ರೂ ಓದಿ ಹೇಳಿದರು. ಅದರ ಮೊದಲು ಅವರು ಹೀಗೆ ಹೇಳಿದರು: ಇಂದಿನ ಈ ಸಮ್ಮೇಳನ ಅದ್ವಿತೀಯವಾಗಿದೆ. ಒಬ್ಬ ಕ್ರೈಸ್ತನಾದ ನನ್ನ ಅನುಭವವೇನೆಂದರೆ ಯಾವುದಾದರೊಂದು ಧರ್ಮದ ಅನುಯಾಯಿ ಆಗಿರುವ ಒಬ್ಬನು ಅನ್ಯ ಧರ್ಮದವರ ಭಾವನೆಗಳನ್ನು ಧರ್ಮರಹಿತನಾದ ವ್ಯಕ್ತಿಗಿಂತ ಉತ್ತಮವಾಗಿ ಮನವರಿಕೆಮಾಡಿಕೊಳ್ಳಲು ಸಾಧ್ಯವಿದೆ.

ಬ್ರಿಟನ್ ಪ್ರಧಾನಮಂತ್ರಿಯ ಸಂದೇಶದಲ್ಲಿ ಹೀಗೆ ಹೇಳಲಾಗಿತ್ತು: ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ವಿವಿಧ ಧರ್ಮಗಳ ಪ್ರತಿನಿಧಿಗಳನ್ನು ಒಂದು ವೇದಿಕೆಯಲ್ಲಿ ಜಮಾಯಿಸಲು ಅಹ್ಮದಿಯಾ ಮುಸ್ಲಿಮ್ ಜಮಾಅತ್‌ಗೆ ಸಾಧ್ಯವಾದುದಕ್ಕೆ ನಾನು ಶುಭಾಶಯಗಳನ್ನು ಕೋರುತ್ತೇನೆ. ಬ್ರಿಟನಿನ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಅನುಪಮೇಯವಾಗಿ ಸಮಾಜ ಸೇವೆ ಮಾಡಿದುದಕ್ಕೋಸ್ಕರ ನಾನು ಮೆಚ್ಚಿಗೆ ಸೂಚಿಸುತ್ತೇನೆ. ನೀವು ಒಂದು ಕಡೆ ದೇಶದ ವಿವಿಧ ಭಾಗಗಳಲ್ಲಿ ಸರ್ವ ಧರ್ಮ ಸಮ್ಮೇಳನಗಳನ್ನು ನಡೆಸುತ್ತಿರುವಾಗ ಇನ್ನೊಂದು ಕಡೆ ಇತ್ತೀಚೆಗೆ ಸಂಭವಿಸಿದ ನೆರೆ ಹಾವಳಿಯ ಸಂದರ್ಭದಲ್ಲಿ ಸಂತ್ರಸ್ತರಾದ ಜನರಿಗೆ ನೆರವನ್ನು ನೀಡುತ್ತಿರುವಿರಿ. (ಅಲ್ಲಾಹನ ಅನುಗ್ರಹದಿಂದ ಖುದ್ದಾಮುಲ್ ಅಹ್ಮದಿಯಾ ಈ ನಿಟ್ಟಿನಲ್ಲಿ ಬಹಳ ದೊಡ್ಡ ಸೇವೆ ಸಲ್ಲಿಸಿವೆ) ವಿವಿಧ ಧರ್ಮಗಳ ಜನರ ಮಧ್ಯೆ ಸಂತೋಷಭರಿತ ಸಂಬಂಧ ಸ್ಥಾಪನೆ ಬಗ್ಗೆ ಹೇಳವುದಾದರೆ ಇಂದು ಏರ್ಪಡಿಸಲಾಗಿರುವ ಈ ಸಮ್ಮೇಳನ ನೀವು ಈ ಉದ್ದೇಶವನ್ನು ಈಡೇರಿಸಲು ಎಷ್ಟು ಕಾಳಜಿ ಹೊಂದಿರುವಿರಿ ಎನ್ನುವುದನ್ನು ಸ್ಪಷ್ಟಪಡಿಸುತ್ತದೆ. ವಿವಿಧ ಧರ್ಮಗಳ ಜನರು ಒಟ್ಟಿಗೆ ಸೇರಲಿ ಮತ್ತು ಲೋಕವು ಶಾಂತಿಧಾಮವಾಗಲಿ ಎಂದು ನೀವು ಬಯಸುತ್ತಿರುವಿರಿ. ಈ ಸಮ್ಮೇಳನದಲ್ಲಿ ಬ್ರಿಟಿಷ್ ಸರಕಾರದ ಪ್ರಾತಿನಿಧ್ಯ ಸಹ ಇದೆ ಎನ್ನುವುದರ ಬಗ್ಗೆ ನನಗೆ ಬಹಳ ಸಂತೋಷವಾಗುತ್ತಿದೆ. ನಾವು ಅಹ್ಮದಿಯಾ ಮುಸ್ಲಿಮ್ ಜಮಾಅತ್ ಇಮಾಮರೊಂದಿಗೆ ಮತ್ತು ಇತರ ಧರ್ಮಗಳ ಪ್ರತಿನಿಧಿಗಳೊಂದಿಗೆ ಹಾಗು ಇತರ ಅತಿಥಿಗಳೊಂದಿಗೆ ಸೇರಿಕೊಂಡು ವಿವಿಧ ಧರ್ಮಗಳು ಒಂದು ಇನ್ನೊಂದರೊಂದಿಗೆ ಸಹಕರಿಸಿ ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ತಮ್ಮ ಕೆಲಸಗಳನ್ನು ಹೇಗೆ ಮಾಡಬಹುದು ಎನ್ನುವುದರ ಬಗ್ಗೆ ವಿಚಾರ ವಿನಿಮಯ ಮಾಡುವೆವು.

ಬ್ರಿಟನಿನ ಮಹಾರಾಣಿ ಚರ್ಚ್ ಆಫ್ ಇಂಗ್ಲೆಂಡ್ ಮುಖ್ಯಸ್ಥೆಯಾಗಿದ್ದಾರೆ. ಅವರ ಖಾಸಗಿ ಕಾರ್ಯದರ್ಶಿ ಹೀಗೆ ಬರೆದಿದ್ದಾರೆ: ಅಹ್ಮದಿಯಾ ಮುಸ್ಲಿಮ್ ಜಮಾಅತ್ ಬ್ರಿಟನ್‌ನಲ್ಲಿ ತನ್ನ ಶತವಾರ್ಷಿಕ ಸಮಾರಂಭವನ್ನು ಗಿಲ್ಡ್ ಹಾಲ್‌ನಲ್ಲಿ ಭವ್ಯ ಜಾಗತಿಕ ಸರ್ವಧರ್ಮ ಸಮ್ಮೇಳನವನ್ನು ಏರ್ಪಡಿಸಿ ಜರಗಿಸುವುದನ್ನು ತಿಳಿದು ಮಹಾರಾಣಿಗೆ ಬಹಳ ಸಂತೋಷವಾಗಿದೆ. ಈ ಸಮ್ಮೇಳನದ ಉದ್ದೇಶ ಲಕ್ಷ್ಯಗಳನ್ನು ತಿಳಿದು ಅವರಿಗೆ ಬಹಳ ಸಂತೋಷವಾಯಿತು. ಮಹಾರಾಣಿಯ ಸಂದೇಶವನ್ನು ಅಪೇಕ್ಷಿಸಿರುವುದಕ್ಕೆ ಅವರು ಕೃತಜ್ಞತೆ ಸೂಚಿಸುತ್ತಾರೆ. ಈ ಸಮ್ಮೇಳನ ಸ್ಮರಿಸಲ್ಪಡುವ ಯಶಸ್ವೀ ಸಮ್ಮೇಳನವಾಗಲಿ ಎಂದು ಮಹಾರಾಣಿ ಹೃತ್ಪೂರ್ವಕವಾಗಿ ಹಾರೈಸಿದ್ದಾರೆ.

ಇವು ಅಲ್ಲಿ ಇತರರು ಪ್ರಕಟಪಡಿಸಿದ ಅಭಿಪ್ರಾಯಗಳ ಸಂಕ್ಷಿಪ್ತ ವಿವರಣೆಯಾಗಿದೆ. ಇನ್ನು ನಾನು ಮಾಡಿದ ಭಾಷಣದ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸುತ್ತೇನೆ. ನಾನು ಅಲ್ಲಿ ಹೀಗೆ ಹೇಳಿದೆ:

ಮನುಷ್ಯನು ತನ್ನನ್ನು ಸುಧಾರಣೆ ಮಾಡಬೇಕೆಂದು ಅಲ್ಲಾಹನು ಬಯಸುತ್ತಾನೆ. ಮನುಷ್ಯನು ಅಲ್ಲಾಹನ ಹಕ್ಕುಗಳನ್ನು ಈಡೇರಿಸುವವರಾಗಬೇಕು, ಅಲ್ಲಾಹನ ಸೃಷ್ಠಿಗಳ ಹಕ್ಕುಗಳನ್ನು ಈಡೇರಿಸುವವರಾಗಬೇಕೆಂದು ಅಲ್ಲಾಹನು ಇಚ್ಛಿಸುತ್ತಾನೆ. ಈ ಉದ್ದೇಶ ಲಕ್ಷ್ಯವನ್ನು ಈಡೇರಿಸಲು ಅಲ್ಲಾಹನು ಸಂದೇಶವಾಹಕರನ್ನು ಲೋಕಕ್ಕೆ ಕಳುಹಿಸುತ್ತಾನೆ. ಸಂದೇಶವಾಹಕರಾದ ಪ್ರವಾದಿಗಳ ಉಪದೇಶಗಳನ್ನು ಅನುಸರಿಸುವವರು ಜಯಶಾಲಿಗಳಾಗುತ್ತಾರೆ. ಪ್ರವಾದಿಗಳನ್ನು ತಿರಸ್ಕರಿಸುವವರು ಕೆಟ್ಟ ಅಂತಿಮಗತಿಯನ್ನು ತಲಪುತ್ತಾರೆ. ಅಲ್ಲಾಹನು ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವಸಲ್ಲಮರನ್ನು ಸಮಸ್ತ ಲೋಕದ ಸುಧಾರಣೆಗೋಸ್ಕರ ಕಳುಹಿಸಿದಾಗ ಅವರು ಈ ಕೆಲಸವನ್ನು ಈಡೇರಿಸಲು ಪ್ರಚಾರಕಾರ್ಯಗಳನ್ನು ತೀವ್ರಗತಿಯಿಂದ ಮುಂದುವರಿಸಿದರು. ಅವರು ಕೇವಲ ಪ್ರಚಾರಕ್ಕೆ ತನ್ನ ಕೆಲಸವನ್ನು ಸೀಮಿತಗೊಳಿಸದೆ ರಾತ್ರಿ ಹೊತ್ತು ಅಲ್ಲಾಹನೊಂದಿಗೆ ಅಳುತ್ತಾ ಪ್ರಾರ್ಥಿಸುತ್ತಾ ಜನರ ಹೃದಯಗಳನ್ನು ತೆರೆಯುವಂತೆ ಬೇಡಿಕೊಂಡರು. ಅವರು ಸಾಷ್ಟಾಂಗ ಪ್ರಣಾಮ ಮಾಡುತ್ತಿದ್ದ ಸ್ಥಳ ಕಣ್ಣೀರಿನಿಂದ ಒದ್ದೆಯಾಗುತ್ತಿತ್ತು. ಮನುಷ್ಯರನ್ನು ಸುಧಾರಣೆ ಮಾಡುವ ಬಗ್ಗೆ ಮತ್ತು ಅವರನ್ನು ನಾಶದಿಂದ ಸಂರಕ್ಷಿಸಲು ಅವರ ಹೃದಯದಲ್ಲಿ ಎಂತಹ ನೋವಿತ್ತೆಂದರೆ ಅದನ್ನು ವಿವರಿಸಲು ಸಾಧ್ಯವಾಗದು. ಎಲ್ಲಾ ವಿಧಗಳ ಕೆಟ್ಟ ಕೆಲಸಗಳನ್ನು ಮಾಡುತ್ತಿದ್ದ ಜನರನ್ನು ಎಲ್ಲಾ ಕೆಡುಕುಗಳಿಂದ ದೂರಸರಿಸಿ ಉನ್ನತ ನೈತಿಕ ಗುಣಗಳನ್ನು ಹೊಂದಿ ಅಲ್ಲಾಹನೊಂದಿಗೆ ನಿಕಟ ಸಂಬಂಧ ಸ್ಥಾಪಿಸುವವರನ್ನಾಗಿ ಹಝ್ರತ್ ಪೈಗಂಬರರು ಪರಿವರ್ತಿಸಿದರು. ಇಂತಹ ಪರಿವರ್ತನೆಯನ್ನು ಯಾವುದೇ ಲೌಕಿಕ ಶಕ್ತಿಗೆ ಮಾಡಲು ಸಾಧ್ಯವಾಗಲಾರದು. ಪ್ರಾರ್ಥನೆಗಳನ್ನು ಆಲಿಸುವವನೂ ಹೃದಯಗಳ ಮೇಲೆ ಅಧಿಕಾರ ಹೊಂದಿದವನೂ ಆಗಿರುವ ಅಲ್ಲಾಹನು ಮಾತ್ರ ಮಾಡಿದ ಕೆಲಸ ಇದಾಗಿದೆ.

ಶತ್ರುಗಳೊಂದಿಗೆ ಸಹ ಉತ್ತಮ ರೀತಿಯಲ್ಲಿ ವರ್ತಿಸುವ ಎಂತಹ ಉದಾಹರಣೆಗಳನ್ನು ಹಝ್ರತ್ ಪೈಗಂಬರ(ಸ)ರು ಸ್ಥಾಪಿಸಿದರೆಂದರೆ ಅಂತಹ ಉದಾಹರಣೆ ಲೌಕಿಕ ವ್ಯವಹಾರಗಳಲ್ಲಿ ಎಲ್ಲಿಯೂ ಕಾಣಲು ಸಾಧ್ಯವಾಗದು. ಹಝ್ರತ್ ಪೈಗಂಬರ(ಸ)ರು ಮಕ್ಕದಲ್ಲಿ ಜೀವಿಸಿರುವಾಗ ಅತ್ಯಂತ ಹೆಚ್ಚು ದೌರ್ಜನ್ಯ ಮಾಡಿದ ಶತ್ರುಗಳನ್ನು ಮಕ್ಕವನ್ನು ಜಯಿಸಿದ ಸಂದರ್ಭದಲ್ಲಿ ಹೇಗೆ ಕ್ಷಮಿಸಿದಿರೆಂದರೆ ಆ ಶತ್ರುಗಳು ಯಾವ ತಪ್ಪು ಅಥವಾ ದುಷ್ಕೃತ್ಯ ಮಾಡಿರಲಿಲ್ಲ ಎಂಬಂತೆ. ಹಝ್ರತ್ ಪೈಗಂಬರ(ಸ)ರ ವಿರುದ್ಧ ಬಲಾತ್ಕಾರ ಮತ್ತು ಯುದ್ಧದ ಬಗ್ಗೆ ದೋಷಾರೋಪ ಹೊರಿಸಲಾಗಿದೆ. ಈಗಲೂ ದೋಷಾರೋಪಗಳನ್ನು ಹೊರಿಸಲಾಗುತ್ತಿದೆ. ಇವು ಚಾರಿತ್ರಿಕ ಸತ್ಯಾಂಶಗಳ ಬಗ್ಗೆ ತಿಳುವಳಿಕೆ ಇಲ್ಲದೆ ಇರುವುದರಿಂದಾಗಿದೆ. ಹಝ್ರತ್ ಪೈಗಂಬರರು ಯಾವತ್ತೂ ಯಾವುದೇ ಯುದ್ಧವನ್ನೂ ತನ್ನ ಕಡೆಯಿಂದ ಪ್ರಾರಂಭ ಮಾಡಿರಲಿಲ್ಲ.

ನಾನು ಮತ್ತೂ ಮುಂದುವರಿಸಿ ಈ ರೀತಿ ಹೇಳಿದೆ: ನಾನು ಮತ್ತು ಅಹ್ಮದಿಯಾ ಮುಸ್ಲಿಮ್ ಜಮಾಅತ್ ಹೀಗೆ ನಂಬುತ್ತೇವೆ:- ವಾಗ್ದತ್ತ ಮಸೀಹರಾಗಿ ಆಗಮಿಸಿದ ಅಹ್ಮದಿಯಾ ಜಮಾಅತಿನ ಸ್ಥಾಪಕರು ತಮ್ಮ ಅನುಯಾಯಿಗಳಲ್ಲಿ ನೈಜ ಇಸ್ಲಾಮನ್ನು ಸ್ಥಾಪಿಸಿದರು. ನೈಜ ಇಸ್ಲಾಮ್ ಧರ್ಮವನ್ನು ಅನುಸರಿಸುವ ಒಂದು ಜಮಾಅತನ್ನು ಅವರು ಸ್ಥಾಪಿಸಿದರು. ಈ ಜಮಾಅತ್ ನೈಜ ಇಸ್ಲಾಮೀ ತತ್ವಗಳನ್ನು ಅನುಸರಿಸಲು ಪ್ರಯತ್ನಿಸುತ್ತಿದೆ. ನೈಜ ಇಸ್ಲಾಮನ್ನು ಪುನಶ್ಚೇತನಗೊಳಿಸಲು ಆಗಮಿಸಿದ ವಾಗ್ದತ್ತ ಮಸೀಹರಿಗೆ ಸಹ ಅಲ್ಲಾಹನು ಬೆಂಬಲ ನೀಡಿದನು. ವಾಗ್ದತ್ತ ಮಸೀಹರು ನಮಗೆ ಹೀಗೆ ಮನವರಿಕೆ ಮಾಡಿಕೊಟ್ಟರು. ಅಲ್ಲಾಹನಿಗೆ ಸಂಬಂಧಿಸಿದ ವಿಷಯಗಳು ಪುರಾತನ ಕಥೆಗಳಿಗೆ ಸೀಮಿತಗೊಂಡಿಲ್ಲ. ಅಲ್ಲಾಹನು ಈಗ ಸಹ ಜೀವಂತವಿರುವನು. ಅವನು ತನ್ನ ಸಾತ್ವಿಕರಾದ ದಾಸರೊಂದಿಗೆ ಮಾತನಾಡುತ್ತಾನೆ ಮತ್ತು ದೃಷ್ಟಾಂತಗಳನ್ನು ತೋರಿಸುತ್ತಾನೆ. ಆದುದರಿಂದ ಲೋಕವು ಈ ವಿಷಯದ ಕಡೆಗೆ ಗಮನ ಕೊಡಬೇಕು. ಜನರು ತಮ್ಮ ತಪ್ಪುಗಳಿಗೋಸ್ಕರ ದೇವನ ಮೇಲೆ ಮತ್ತು ಧರ್ಮದ ಮೇಲೆ ಆರೋಪ ಹೊರಿಸಬಾರದು. ಜನರು ತಮ್ಮನ್ನು ಸ್ವತಃ ಪರಿಶೀಲಿಸಬೇಕು. ಲೋಕವು ತನ್ನನ್ನು ಸುಧಾರಣೆ ಮಾಡಿಕೊಳ್ಳುವ ಭಾಗ್ಯವನ್ನು ಅಲ್ಲಾಹನು ದಯಪಾಲಿಸಲಿ.

ಅನಂತರ ಸಭಿಕರಲ್ಲಿ ಕೆಲವರು ಪ್ರಕಟಪಡಿಸಿದ ಅನಿಸಿಕೆಗಳನ್ನು ಸಹ ಹುಝೂರ್ ವಿವರಿಸಿದರು.

ಯುರೋಪಿಯನ್ ಕೌನ್ಸಿಲ್ ಫೋರ್ ರಿಲೀಜಿಯಸ್ ಲೀಡರ್ಸ್‌ನ ಜನರಲ್ ಸೆಕ್ರೆಟರಿ ಸ್ಟೈನ್ ವಿಲ್ಲಮ್ಸ್‌ಟಡ್ ಹೀಗೆ ಹೇಳಿದರು: ಈ ರೀತಿ ವಿವಿಧ ಧರ್ಮಗಳ ಜನರು ಒಟ್ಟಿಗೆ ಕುಳಿತುಕೊಂಡು ಒಬ್ಬರನ್ನೊಬ್ಬರ ಮಾತುಗಳನ್ನು ಕಿವಿಗೊಟ್ಟು ಕೇಳಲು ಸಾಧ್ಯವಾದುದು, ನಾವೆಲ್ಲರೂ ಶಾಂತಿಯನ್ನು ಆಶಿಸುತ್ತೇವೆ ಎಂದು ಅಂಗೀಕರಿಸುವುದು, ಬಹಳ ದೊಡ್ಡದಾದೊಂದು ವಿಜಯವಾಗಿದೆ.

ಗ್ರೆನಡಾ ದೇಶದ ಹೈಕಮೀಶನರ್ ಜೋಸೆಲಿನ್ ವೈಟ್‌ಮ್ಯಾನ್ ಹೀಗೆ ಹೇಳಿದರು: ಇದು ಬಹಳ ಗಂಭೀರ ಸಮಾರಂಭವಾಗಿದೆ. ಇಷ್ಟೆಲ್ಲಾ ಧರ್ಮಗಳ ಪ್ರತಿನಿಧಿಗಳು ಒಂದೇ ಛಾವಣಿಯ ಕೆಳಗೆ ಹೀಗೆ ಜಮಾಯಿಸಿರುವುದು ನಮ್ಮ ವಿಶ್ವಾಸವನ್ನು ವರ್ಧಿಸಿದೆ. ಈ ಕಾಲದ ಲೋಕದ ಸಮಸ್ಯೆಗಳ ನಿವಾರಣೆಗೆ ಜನರನ್ನು ಹೇಗೆ ಒಗ್ಗೂಡಿಸಬಹುದೆಂದು ಇದರಿಂದ ನಾವು ಅಂದಾಜಿಸಬಹುದಾಗಿದೆ ಎನ್ನುವುದು ಸಹ ಈ ಸಮ್ಮೇಳನದ ಒಂದು ಪ್ರಯೋಜನವಾಗಿದೆ.

ಲಂಡನ್ ಮೆಟ್ರೋಪೊಲಿಟನ್ ಪೋಲೀಸ್‌ನಲ್ಲಿ ಕಮಾಂಡರ್ ಆಗಿರುವ ಮ್ಯಾಕ್ ಚಿಶ್ತೀ ಹೀಗೆ ಹೇಳಿದರು: ಪ್ರತಿಯೊಂದು ಧರ್ಮದ ಪ್ರತಿನಿಧಿ ತನ್ನ ಧರ್ಮದ ಒಳಿತುಗಳನ್ನು ವಿವರಿಸಿದರು. ಅನ್ಯ ಧರ್ಮಗಳನ್ನು ವಿಮರ್ಶಿಸಲಿಲ್ಲ ಎನ್ನುವುದು ನನಗೆ ಒಳ್ಳೆಯದಾಗಿ ಕಂಡಿತು. ಹೀಗೆ ವರ್ತಿಸುವುದರಿಂದಲೇ ಪರಸ್ಪರ ಐಕ್ಯ ಮತ್ತು ಏಕತೆಯ ಭಾವನೆ ಉಂಟಾಗುತ್ತದೆ.

ಈ ವಿಷಯದ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಮಹಾರಾಣಿ ವಿಕ್ಟೋರಿಯಾರಿಗೆ ಬರೆದಿದ್ದರು.

ಯುರೋಪಿಯನ್ ಪಾರ್ಲಿಮೆಂಟ್‌ನಲ್ಲಿ ಲಂಡನ್ ಪ್ರತಿನಿಧಿ ಆಗಿರುವ ಡಾಕ್ಟರ್ ಚಾರ್ಲ್ಸ್ ಟೆನ್ನೋಕ್ MEP ಹೀಗೆ ಹೇಳಿದರು: ಭವಿಷ್ಯದಲ್ಲಿ ಈ ಮಾರ್ಗವನ್ನು ಅನುಸರಿಸುವುದು ಹೊರತು ಬೇರೆ ದಾರಿ ಇಲ್ಲ. ನಾವೆಲ್ಲರೂ ದೇವನ ಅಸ್ತಿತ್ವವನ್ನು ನಂಬುತ್ತೇವೆ. ನಾವು ಧರ್ಮದ ಹೆಸರಲ್ಲಿ ಒಬ್ಬರಿನ್ನೊಬ್ಬರೊಂದಿಗೆ ಜಗಳಾಡುತ್ತಾ ಈ ರೀತಿ ಮುಂದುವರಿಯಬೇಕೆಂದು ದೇವನು ಇಚ್ಛಿಸುತ್ತಾನೆಂದು ನಮಗೆ ನಂಬಲು ಸಾಧ್ಯವಿಲ್ಲ. ಆದುದರಿಂದ ಶಾಂತಿಯ ಈ ಸಂದೇಶವನ್ನು ನಾನು ಬಲವಾಗಿ ಬೆಂಬಲಿಸುತ್ತೇನೆ. ಅಹ್ಮದಿಯರಿಗೆ ಸಂಬಂಧಿಸಿ ಗಮನಾರ್ಹವಾದುದು ಅವರ ಧರ್ಮದ ಉಪದೇಶಗಳ ಕೇಂದ್ರ "ಎಲ್ಲರೊಂದಿಗೆ ಪ್ರೀತಿ ಯಾರೊಂದಿಗೂ ದ್ವೇಷವಿಲ್ಲ" ಎಂಬ ತತ್ವವಾಗಿದೆ. ನನ್ನ ಅಭಿಪ್ರಾಯದಲ್ಲಿ ಇದು ಜಾಗತಿಕ ಸ್ವರೂಪದ ಒಂದು ಸಂದೇಶವಾಗಿದೆ. ವಿವಿಧ ಧರ್ಮಗಳಿಗೆ ಸೇರಿದವರು ಎಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಒಗ್ಗೂಡಿದರೂ ಅದು ಹೆಚ್ಚು ಉತ್ತಮವಾಗುವುದು.

ಬ್ರಿಟಿಷ್ ಪಾರ್ಲಿಮೆಂಟಿನ ಆಲ್ ಪಾರ್ಟಿ ಪಾರ್ಲಿಮೆಂಟರಿ ಗ್ರೂಪ್ ಆನ್ ಇಂಟರ್‌ನೇಶನಲ್ ಫ್ರೀಡಮ್ ಆಫ್ ರಿಲೀಜಿಯನ್ ಇದರ ಚೆಯರ್‌ಪರ್ಸನ್ ಆಗಿರುವ ಬ್ಯಾರೋನೆಸ್ಸ್ ಬೆರ್ರಿಜ್ ಹೀಗೆ ಹೇಳಿದರು:

ಧಾರ್ಮಿಕ ಸ್ವಾತಂತ್ರ್ಯದ ಪಾರ್ಲಿಮೆಂಟರಿ ಗ್ರೂಪಿನ ಚೆಯರ್‌ಪರ್ಸನ್ ಆಗುವ ಗೌರವ ನನಗೆ ಲಭಿಸಿದೆ. ಅನ್ಯರಿಗೆ ಸೇವೆ ಸಲ್ಲಿಸಲು ಅಹ್ಮದಿಯಾ ಜಮಾಅತ್ ಹೇಗೆ ಕಾರ್ಯನಿರತವಾಗಿದೆ ಎಂದು ನನಗೆ ತಿಳಿದಿದೆ. ಅಹ್ಮದಿಯಾ ಜಮಾಅತಿನ ಇಮಾಮರು ಇದರ ಬಗ್ಗೆ ತನ್ನ ಭಾಷಣದಲ್ಲಿ ಪ್ರಸ್ತಾಪಿಸಿರುವರು. ನಾವು ಅಹ್ಮದಿಯಾ ಜಮಾಅತ್‌ಗೆ ಅವರ ಕಲಸಗಳಿಗೆ ಬೆಂಬಲ ನೀಡುತ್ತಿರುವುದರಿಂದ ಬಹಳ ಸಂತೋಷವಾಗುತ್ತದೆ. ಅಹ್ಮದಿ ಮುಸ್ಲಿಮರಿಗೆ ಈ ದೇಶದಲ್ಲಿ ಪೂರ್ಣ ಸ್ವಾತಂತ್ರ್ಯವಿದೆ ಎನ್ನುವುದು ಸಹ ಸಂತೋಷದ ಸಂಗತಿಯಾಗಿದೆ.

ಬ್ರಿಟಿಷ್ ಪಾರ್ಲಿಮೆಂಟಿನ ಆಲ್ ಪಾರ್ಟಿ ಪಾರ್ಲಿಮೆಂಟರಿ ಗ್ರೂಪ್ ಆನ್ ಇಂಟರ್‌ನೇಶನಲ್ ಫ್ರೀಡಮ್ ಆಫ್ ರಿಲೀಜಿಯನ್ಸ್‌ನ ಓರ್ವ ಸದಸ್ಯರಾದ ಕೇ ಕಾರ್ಟರ್ ಹೀಗೆ ಹೇಳಿದರು: ಅಹ್ಮದಿಯಾ ಜಮಾಅತಿನ ಇಮಾಮ್ ಹೇಳಿದರು, ಎಲ್ಲಾ ಧರ್ಮಗಳ ಮೂಲಭೂತ ತತ್ವಗಳು ಒಂದೇ ಆಗಿವೆ. ಪ್ರೀತಿ, ಸೌಹಾರ್ದ ಮತ್ತು ಶಾಂತಿ. ಆದರೆ, ಸಂಪರ್ಕ ಮಾಧ್ಯಮಗಳು ಧರ್ಮಗಳನ್ನು ಹೇಗೆ ಚಿತ್ರಿಸುತ್ತಿವೆ ಎಂದರೆ ಮನುಷ್ಯರು ಒಬ್ಬರಿನ್ನೊಬ್ಬರೊಂದಿಗೆ ಜಗಳಮಾಡಲು ಧರ್ಮಗಳು ಪ್ರೇರೇಪಿಸುತ್ತದೆ ಎಂದು ಅವರು ಬಿಂಬಿಸುತ್ತಾರೆ. ಆದರೆ ನಾವು ಇಂದು ಈ ಸಭೆಯಲ್ಲಿ ನೋಡಿದ ಹಾಗೆ ವಾಸ್ತವಿಕ ವಿಷಯ ಸಂಪೂರ್ಣ ಭಿನ್ನವಾಗಿದೆ.

ಒಬ್ಬ ಆಫ್ರಿಕನ್ ಚೀಫ್ ತನ್ನ ಸಂದೇಶ ಪತ್ರದಲ್ಲಿ ಹೀಗೆ ತಿಳಿಸಿದರು: ಅಹ್ಮದಿಯಾ ಜಮಾಅತಿನ ಇಮಾಮರ ಸಂದೇಶ ಶಾಂತಿ ಮತ್ತು ಒಬ್ಬರನ್ನೊಬ್ಬರು ಅರ್ಥ ಮಾಡಿಕೊಳ್ಳುವ ಬಗ್ಗೆಯಾಗಿದೆ. ಲೋಕದ ಎಲ್ಲಾ ಧರ್ಮಗಳು ಪರಸ್ಪರ ವಿಚಾರ ವಿನಿಮಯ ನಡೆಸಬೇಕಾದ

ಆವಶ್ಯಕತೆಯಿದೆ. ಏಕೆಂದರೆ ನಾವೆಲ್ಲರೂ ಆದಮ್ ಸಂತತಿಗಳಾಗಿದ್ದೇವೆ ಮತ್ತು ದೇವನ ಸೃಷ್ಟಿಗಳಾಗಿದ್ದೇವೆ. ನಾವು ಒಬ್ಬರನ್ನೊಬ್ಬರ ಭಾವನೆಗಳನ್ನು ಗೌರವಿಸಬೇಕು. ಶಾಂತಿಯಿಂದ ಜೊತೆಗೂಡಿ ಜೀವಿಸಬೇಕು. ನಾವು ಪರಸ್ಪರ ಜಗಳ ಮಾಡಬಾರದು. ಬದಲಾಗಿ ಶಾಂತಿ ಸ್ಥಾಪನೆಗೋಸ್ಕರ ಸಾಧ್ಯವಿರುವಷ್ಟು ಪ್ರಯತ್ನಿಸಬೇಕಾಗಿದೆ. ಯಹೂದಿ ಪುರೋಹಿತರು ತಮ್ಮ ಇಸ್ರಾಯೇಲ್ ಸರಕಾರಕ್ಕೆ ಇದರ ಬಗ್ಗೆ ತಿಳಿಸಬೇಕು.

ನಂತರ ಓರ್ವ ಕೌನ್ಸಿಲರ್ ಸಂತೋಖ್ ಸಿಂಗ್ ಹೀಗೆ ಹೇಳಿದರು: ಎಲ್ಲಾ ಧರ್ಮಗಳಲ್ಲಿ ಅನೇಕ ಉಪದೇಶಗಳು ಸಮಾನವಾಗಿವೆ ಎಂದು ಅಹ್ಮದಿಯಾ ಜಮಾಅತಿನ ಇಮಾಮ್ ಮನವರಿಕೆ ಮಾಡಿ ಕೊಡುತ್ತಿದ್ದಾರೆಂದು ನಾನು ಭಾವಿಸುತೇನೆ. ಎಲ್ಲಾ ಧರ್ಮಗಳು ನಮಗೆ ಮಾನವೀಯತೆಯನ್ನು ಉಪದೇಶಿಸುತ್ತವೆ. ನಾವು ಜೊತೆಗೂಡಿ ಕೆಲಸ ಮಾಡಬೇಕು ಒಬ್ಬರನ್ನೊಬ್ಬರ ಒಳಿತಿಗೋಸ್ಕರ ಪ್ರಯತ್ನಿಸಬೇಕು.

ನಾರ್ವೆಯ ಕ್ರಿಶ್ಚಿಯನ್ ರಿಪಬ್ಲಿಕ್ ಪಾರ್ಟಿಯ ಬಿಲ್ಲಿ ಟ್ರಾಂಗರ್ ಹೀಗೆ ಹೇಳಿದರು: ಅಹ್ಮದಿಯಾ ಜಮಾಅತಿನ ಇಮಾಮ್ ತಮ್ಮ ಭಾಷಣದ ಕೊನೆಯಲ್ಲಿ ಒಂದು ಮುಖ್ಯ ಸಂದೇಶವನ್ನು ನೀಡಿದರು. ನಾವೆಲ್ಲರೂ ಒಟ್ಟಾಗಿ ಶಾಂತಿ ಸ್ಥಾಪನೆಗೋಸ್ಕರ ಕೆಲಸ ಮಾಡಬೇಕೆಂದು. ಈಗ ಲೋಕಕ್ಕೆ ಈ ಒಂದು ವಿಷಯ ಬಹಳ ಆವಶ್ಯಕವಾಗಿದೆ ಎಂದು ನಾನು ಭಾವಿಸುತ್ತೇನೆ. ನಾರ್ವೆ ದೇಶದಲ್ಲೂ ನಮಗೆ ಈ ಸಂದೇಶದ ಬಹಳ ಆವಶ್ಯಕತೆ ಇದೆ.

ಆಮ್‌ಸ್ಟರ್‌ಡಮ್ ಯುನಿವರ್ಸಿಟಿಯ ಪ್ರೊಫೆಸರ್ ಡಾಕ್ಟರ್ ಟಿ ಸುನೀರ್ ಹೇಳಿದರು: ಇಸ್ಲಾಮ್ ಮತ್ತು ಖುರ್‌ಆನಿನ ಉಪದೇಶಗಳು ದೌರ್ಜನ್ಯಕ್ಕೆ ಬದಲಾಗಿ ಶಾಂತಿ ಸ್ಥಾಪನೆಯನ್ನು ಒತ್ತಿ ಹೇಳುತ್ತವೆ ಎಂದು ಅಹ್ಮದಿಯಾ ಜಮಾಅತಿನ ಇಮಾಮರು ಸ್ಪಷ್ಟ ಶಬ್ದಗಳಲ್ಲಿ ಸಾಬೀತುಗೊಳಿಸಿದ್ದಾರೆ.

ಗ್ರೀಕ್ ಆರ್ತೋಡೋಕ್ಸ್ ಪ್ಯಾಟ್ರಿಯಾರ್ಕ್ ಆಫ್ ಅಂಟಿಯೋಕ್ ಇದಕ್ಕೆ ಸೇರಿದ ಫಾದರ್ ಎಥೆಲ್‌ವೈನ್ ಹೀಗೆ ಹೇಳಿದರು: ಅಹ್ಮದಿಯಾ ಮುಸ್ಲಿಮ್ ಜಮಾಅತ್ ವ್ಯವಸ್ಥೆಗೊಳಿಸಿದ ಅನೇಕ ಕಾರ್ಯಕ್ರಮಗಳಲ್ಲಿ ನಾನು ಭಾಗವಹಿಸಿದ್ದೇನೆ. ಅಹ್ಮದಿಯಾ ಜಮಾಅತಿನ ಇಮಾಮರ ವ್ಯಕ್ತಿತ್ವವನ್ನೂ ಅವರ ಸಂದೇಶವನ್ನೂ ನಾನು ಹೃತ್ಪೂರ್ವಕವಾಗಿ ಮೆಚ್ಚುತ್ತೇನೆ. ಎಂದಿನಂತೆ ಈ ಸಮ್ಮೇಳನದ ಉತ್ತಮ ಭಾಷಣವು ಅಹ್ಮದಿಯಾ ಜಮಾಅತಿನ ಖಲೀಫರದಾಗಿತ್ತು. ನಿಜವಾಗಿಯೂ ವಿವಿಧ ಧರ್ಮಗಳ ಜನರನ್ನು ಜಮಾಯಿಸಿ ಅವರ ಧರ್ಮಗಳ ಬಗ್ಗೆ ಆಲಿಸುವುದು ಬಹಳ ದೊಡ್ಡ ಸಾಹಸದ ಕೆಲಸವೂ ಗಮನಾರ್ಹವೂ ಆಗಿದೆ. ಇದು ಒಂದು ಬಹಳ ದೊಡ್ಡ ಜಯವೂ ಆಗಿದೆ.

ಅಯರ್‌ಲೇಂಡ್‌ನಿಂದ ಆಗಮಿಸಿದ ಒಬ್ಬ ವ್ಯಕ್ತಿ ಹೀಗೆ ಹೇಳಿದರು: ಈ ಸಮ್ಮೇಳನದಲ್ಲಿ ನಾನು ಭಾಗವಹಿಸಿದಾಗ ನನಗೆ ದೊರೆತ ಸಂದೇಶ ನನ್ನನ್ನು ಅಲುಗಾಡಿಸಿತು. ನಾನು ಅಹ್ಮದಿಯರೊಂದಿಗೆ ಹೇಳಲು ಬಯಸುತ್ತೇನೆ, ಇಂದಿನ ಕಾಲದಲ್ಲಿ ಪ್ರಚಾರ ಮಾಡದೆ ನಿಮ್ಮ ಸಂದೇಶ ಹರಡುವುದು ಬಹಳ ಕಷ್ಟಕರವಾಗಿದೆ. ಅಹ್ಮದಿಯಾ ಜಮಾಅತ್ ಇಷ್ಟೆಲ್ಲಾ ಕೆಲಸಗಳನ್ನು ಮಾಡುತ್ತಿದೆ. ಆದರೆ ನೀವು ನಿಮ್ಮ ಕೆಲಸಗಳ ಬಗ್ಗೆ ಪ್ರಚಾರವನ್ನು ಚೆನ್ನಾಗಿ ಮಾಡುವುದಾದರೆ ನನಗೆ ಸಂತೋಷವಾಗುವುದು ಏಕೆಂದರೆ ಈಗ ನಿಮ್ಮ ಬಗ್ಗೆ ಲೋಕದಲ್ಲಿ ಬಹಳ ಕಡಿಮೆ ಸಂಖ್ಯೆಯ ಜನರು ಮಾತ್ರವೇ ತಿಳಿದಿರುವರು.

ಯುರೋಪಿಯನ್ ಕೌನ್ಸಿಲ್ ಆಫ್ ರಿಲೀಜಿಯಸ್ ಲೀಡರ್ಸ್‌ನೊಂದಿಗೆ ಸಂಬಂಧ ಹೊಂದಿರುವ ಜಹಾಂಗೀರ್ ಸಾರೋ ಸಾಹೇಬ್ ಹೇಳಿದರು: ನಾನು ಝೊರಾಷ್ಟ್ರೀಯನ್ ಧರ್ಮಕ್ಕೆ ಸೇರಿದವನಾಗಿದ್ದೇನೆ. ಈ ಸಮ್ಮೇಳನದಿಂದ ನಾನು ಬಹಳ ಪ್ರಭಾವಿತನಾದೆನು. ಎಲ್ಲಾ ಭಾಷಣಗಾರರು ಉತ್ತಮವಾಗಿಯೇ ಭಾಷಣ ಮಾಡಿದ್ದಾರೆ. ಆದರೆ ಅಹ್ಮದಿಯಾ ಜಮಾಅತ್‌ನ ಇಮಾಮರ ಸಮಾರೋಪ ಭಾಷಣ ಬಹಳ ಉತ್ತಮವಾಗಿತ್ತು.

ಧಾರ್ಮಿಕ ತತ್ವಗಳ ಅಧ್ಯಾಪಕರಾದ ರಾಬಿನ್ ಹಸ್ಸೀ ಹೀಗೆ ಹೇಳಿದರು: ಈ ಸಮಾರಂಭ ಇಷ್ಟರ ಮಟ್ಟಿಗೆ ಆಧ್ಯಾತ್ಮಿಕ ಮೌಲ್ಯಗಳಿಂದ ತುಂಬಿರುವುದಾಗಿ ನಾನು ಭಾವಿಸಿರಲಿಲ್ಲ. ನಾನು ಅನೇಕ ಧರ್ಮಗಳ ಸಂದೇಶಗಳನ್ನು ಆಲಿಸಿದೆ. ನಾನು ಮನೆಗೆ ಮರಳಿದ ನಂತರ ಅವುಗಳ ಬಗ್ಗೆ ನಿಶ್ಚಯವಾಗಿಯೂ ಚಿಂತಿಸುವೆನು. ಅಹ್ಮದಿಯಾ ಜಮಾಅತಿನ ಇಮಾಮರ ಭಾಷಣ ಬೇಗನೆ ಮುದ್ರಿತವಾಗಿ ಬರಲಿ ಎಂದು ನಾನು ಆಶಿಸುತ್ತೇನೆ.

ಒಂದು ಕೆಥೆಡ್ರಲ್‌ಗೆ ಸಂಬಂಧಿಸಿರುವ ಡಾಕ್ಟರ್ ಕೆನನ್ ಕೇನ್ ಹೀಗೆ ಹೇಳಿದರು: ನಮಗೆ ಧರ್ಮದ ಆವಶ್ಯಕತೆ ಇಲ್ಲ ಎಂದು ಜನರು ಹೇಳಲು ಪ್ರಾರಂಭಿಸಿದ್ದರು. ಆದರೆ ಈ ಮಾತು ನಿರಾಧಾರವಾಗಿದೆ ಎಂದು ಖಂಡಿತವಾಗಿ ಈಗ ಸಾಬೀತುಗೊಂಡಿದೆ.

ಬೆಲ್ಜಿಯಮ್‌ನ ಅನ್‌ವೆರ್ಪೆನ್ ಯುನಿವರ್ಸಿಟಿಯ ಡಾಕ್ಟರ್ ಲಿಡಿಯಾ ಹೇಳಿದರು: ಇಬ್ಬರು ಪ್ರೊಫೆಸರ್‌ಗಳು ಈ ಸಮ್ಮೇಳನಕ್ಕೆ ಆಗಮಿಸಿದ್ದರು. ಅವರಿಬ್ಬರು ಹೇಳಿದರು: ಇಸ್ಲಾಮ್ ಮತ್ತು ಹಝ್ರತ್ ಪೈಗಂಬರರ ವಾಸ್ತವಿಕ ಉಪದೇಶಗಳನ್ನು ಅಹ್ಮದಿಯಾ ಜಮಾಅತಿನ ಇಮಾಮರು ವಿವರಿಸಿದಾಗ ಅವರ ಮೇಲೆ ಬಹಳ ಪ್ರಭಾವ ಬೀರಿತು. ಭಾಷಣ ಆಲಿಸಿದ ನಂತರ ಅವರು ಈ ರೀತಿ ತೀರ್ಮಾನಿಸಿರುವರು – ನಾವು ಯುನಿವರ್ಸಿಟಿಯಲ್ಲಿ ನಮ್ಮ ವಿದ್ಯಾರ್ಥಿಗಳಿಗೆ ಪವಿತ್ರ ಖುರ್‌ಆನಿನ ಫ್ಲೆಮಿಶ್ ಭಾಷಾಂತರ ನೀಡುವೆವು– ಅವರು ಇಸ್ಲಾಮಿನ ವಾಸ್ತವಿಕ ಉಪದೇಶಗಳನ್ನು ತಿಳಿದುಕೊಳ್ಳಲಿಕ್ಕಾಗಿ. ಅವರು ಮರಳುವಾಗ ಅವರಿಗೆ ಪವಿತ್ರ ಖುರ್‌ಆನಿನ ಭಾಷಾಂತರ ಪ್ರತಿಗಳನ್ನು ನೀಡಲಾಯಿತು. ಅವರು ಅದನ್ನು ವಿದ್ಯಾರ್ಥಿಗಳಿಗೆ ಹಂಚುತ್ತಿದ್ದಾರೆ. ಈ ರೀತಿಯಾಗಿ ಅಲ್ಲಾಹನ ಅನುಗ್ರಹದಿಂದ ಪ್ರಚಾರಮಾಡಲು ಹೊಸ ಮಾರ್ಗಗಳು ತೆರೆಯಲ್ಪಟ್ಟುವು.

ಸಾಂತಿಯಾಗೋ ಕೆಟಾಲ ರೂಬಿಯೋ ಸ್ಪೈನ್ ದೇಶದಿಂದ ಆಗಮಿಸಿದ್ದರು. ಅವರು ಮ್ಯಾಡ್ರಿಡ್ ಯುನಿವರ್ಸಿಟಿಯಲ್ಲಿ ಧರ್ಮಗಳ ಪ್ರೊಫೆಸರ್ ಆಗಿದ್ದಾರೆ. ಅನೇಕ ಗ್ರಂಥಗಳ ಲೇಖಕರು ಕೂಡ ಆಗಿದ್ದಾರೆ. ನಮ್ಮ ಜಮಾಅತ್‌ನೊಂದಿಗೆ ಅವರು ನಿಕಟಸಂಬಂಧ ಹೊಂದಿದ್ದಾರೆ. ಯುರೋಪಿಯನ್ ಪಾರ್ಲಿಮೆಂಟ್‌ನಲ್ಲಿ 2012ರಲ್ಲಿ ನಡೆದ ಸಭೆಗೂ ಅವರು ಆಗಮಿಸಿದ್ದರು ಮತ್ತು ನನ್ನನ್ನು ಭೇಟಿಯಾಗಿದ್ದರು. ಅವರು ಹೇಳುತ್ತಾರೆ: ಈ ಜಾಗತಿಕ ಸರ್ವಧರ್ಮ ಸಮ್ಮೇಳನದ ಬಗ್ಗೆ ನನ್ನ ವಿಚಾರಗಳನ್ನೂ ಭಾವನೆಗಳನ್ನೂ ವಿವರಿಸುವುದಾದರೆ ಈ ಸಮ್ಮೇಳನದ ಮಹತ್ವ ಮತ್ತು ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸಂದೇಶದ ಬಗ್ಗೆ ಬರೆಯಲು ಅನೇಕ ಪುಟಗಳು ಬೇಕಾಗಬಹುದು. ಲೋಕದ ಚರಿತ್ರೆಯಲ್ಲಿ ವಿವಿಧ ಧರ್ಮಗಳು ಜಗಳಗಳಿಗೆ ಕಾರಣಗಳಾಗಿತ್ತು. ಈಗಿನ ಕಾಲಘಟ್ಟದಲ್ಲಿ ಸಹ ವಿವಿಧ ಸಂಸ್ಕೃತಿಗಳು, ಪೂರ್ವ–ಪಶ್ಚಿಮ,

ಇಸ್ಲಾಮ್ ಮತ್ತು ಕ್ರೈಸ್ತಧರ್ಮ, ಅಭಿವೃದ್ಧಿಹೊಂದಿದ ಮತ್ತು ಅಭಿವೃದ್ಧಿಶೀಲ ದೇಶಗಳು, ಇವುಗಳ ಮಧ್ಯೆ ಮತ ಭೇದಗಳು ಜಾರಿಯಲ್ಲಿವೆ. ಈ ಮತಭೇಧಗಳನ್ನು ದೌರ್ಜನ್ಯ ಮತ್ತು ಹಗೆತನ ವರ್ಧಿಸುವಂತೆ ಗಾಳಿ ಹಾಕಲು ನೆವನಗಳಾಗಿ ಬಳಸಲಾಗುತ್ತಿವೆ. ಅದರೆ ಅಹ್ಮದಿಯಾ ಜಮಾಅತಿನ ಧ್ಯೇಯವಾಕ್ಯ "ಎಲ್ಲರೊಂದಿಗೆ ಪ್ರೀತಿ, ಯಾರೊಂದಿಗೂ ದ್ವೇಷವಿಲ್ಲ" ಎಂಬುದು ಎಲ್ಲಾ ಧರ್ಮಗಳ ಸಾರಾಂಶವಾಗಿದೆ. ಲೋಕದ ಎಲ್ಲಾ ಧರ್ಮಗಳನ್ನು ಮತ್ತು ಜನರನ್ನು ಅವರ ನಂಬಿಕೆಗಳ ಮತ್ತು ವಿಚಾರಗಳ ಮೇಲೆ ಈ ಧ್ಯೇಯವಾಕ್ಯ ಸ್ವಾಧೀನ ಸ್ಥಾಪಿಸಿ ಒಗ್ಗೂಡಿಸುತ್ತದೆ. ಮುಸ್ಲಿಮರ ಒಂದು ಗುಂಪು ಜಗಳ, ಹಗೆತನ, ತಮ್ಮ ಮತ್ತು ಅನ್ಯರ ಜೀವಕ್ಕೆ ಅಪಾಯ ಒಡ್ಡುವ ಚಟುವಟಿಕೆಗಳು, ತಮ್ಮವರ ಮೇಲೆಯೇ ಆಕ್ರಮಣ ಮಾಡುವುದು ಇತ್ಯಾದಿಗಳಿಗೆ ಬೆಂಬಲ ನೀಡುತ್ತಿರುವಾಗ, ಅಹ್ಮದಿಯಾ ಜಮಾಅತಿನ ಈ ಪರಿಶ್ರಮ ಅತ್ಯಂತ ಮಹತ್ವಪೂರ್ಣವಾಗಿದೆ. ಆದುದರಿಂದ ಇಂತಹ ಸಮಾರಂಭಗಳ ಬಗ್ಗೆ ಜಾಗತಿಕ ಮಟ್ಟದಲ್ಲಿ ಧಾರ್ಮಿಕ ಮತ್ತು ವೈಚಾರಿಕ ಸಮಾಜಗಳಲ್ಲಿ ಧಾರಾಳ ಪ್ರಚಾರ ಲಭಿಸಬೇಕಾಗಿದೆ.

ಮೀಗೆಲ್ ಗಾರ್ಸಿಯ ಪೆಡ್ರೋಬಾದ್‌ನಿಂದ ಆಗಮಿಸಿದ ಮಹನೀಯರಾಗಿದ್ದಾರೆ. ಅವರು ಮೇಯರ್ ಕೂಡ ಆಗಿದ್ದರು. ಇವರು ಮೇಯರ್ ಆಗಿದ್ದಾಗ 1980ರಲ್ಲಿ ಮಸ್‌ಜಿದ್ ಬಶಾರತ್ ನಿರ್ಮಿಸಲು ಅನುಮತಿಯನ್ನು ಚರ್ಚ್‌ಗಳ ವಿರೋಧವನ್ನು ಕಡೆಗಣಿಸಿ ನೀಡಿದ್ದರು. ಮಸ್‌ಜಿದ್ ಬಶಾರತ್ ಉದ್ಘಾಟನೆಯ ಸಂದರ್ಭಗಳಲ್ಲಿ ಸಹ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್‌ರನ್ನು ಭೇಟಿ ಆಗಿದ್ದರು. ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ಒಂದು ಫಲಕವನ್ನು ಮೇಯರರಿಗೆ ಕಾಣಿಕೆಯಾಗಿ ನೀಡಿದ್ದರು. ಅದರಲ್ಲಿ ಕಲಿಮವನ್ನು ಬರೆಯಲಾಗಿತ್ತು. ಅವರು ಆ ಫಲಕವನ್ನು ತನ್ನ ಕಚೇರಿಯಲ್ಲಿ ಇರಿಸಿದ್ದಾರೆ. ಅವರು ಜಮಾಅತ್‌ನಿಂದ ಧಾರಾಳ ಪ್ರಭಾವಿತರಾಗಿದ್ದಾರೆ. ಅವರು ಹೇಳುತ್ತಾರೆ:

ವಿವಿಧ ಧರ್ಮಗಳ ಪ್ರತಿನಿಧಿಗಳನ್ನೂ ಪಾರ್ಲಿಮೆಂಟ್ ಸದಸ್ಯರನ್ನೂ ರಾಜಕಾರಣಿಗಳನ್ನೂ ವಿದ್ಯಾಭ್ಯಾಸ ಪರಿಣಿತರನ್ನೂ ಮಾನವರೊಂದಿಗೆ ಸಹಾನುಭೂತಿ ಸೂಚಿಸುವ ವಿವಿಧ ಸಂಸ್ಥೆಗಳ ಜನರನ್ನೂ ಲಂಡನ್‌ನಲ್ಲಿ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಒಗ್ಗೂಡಿಸಿದೆ. ಶಾಂತಿ ಮತ್ತು ಸೌಹಾರ್ದದ ಬಗ್ಗೆ ವಿಚಾರವಿನಿಮಯ ನಡೆಸಲು ಇದನ್ನು ಏರ್ಪಡಿಸಲಾಗಿದೆ. ಇದು ಅತ್ಯಂತ ಪ್ರಯೋಜನಕರವಾದ ಕೆಲಸವಾಗಿದೆ. ನಾನು ಅಹ್ಮದಿಯಾ ಜಮಾಅತ್‌ಗೆ ಈ ಸಮಾರಂಭದ ವ್ಯವಸ್ಥೆಗೊಳಿಸಿದುದಕ್ಕೆ ಶುಭಾಶಂಸೆ ಅರ್ಪಿಸುತ್ತೇವೆ. ಈ ಜಮಾಅತ್ ತನ್ನ ಉದ್ದೇಶ ಲಕ್ಷ್ಯವನ್ನು ಈಡೇರಿಸುವಲ್ಲಿ ಜಯಗಳಿಸಲಿ ಎಂದು ನಾನು ಆಶಿಸುತ್ತೇನೆ. 1981ರಲ್ಲಿ ಪೆಡ್ರೋಬಾದ್‌ನಲ್ಲಿ ಬಶಾರತ್ ಮಸ್‌ಜಿದ್‌ಗೆ ಅಸ್ತಿಭಾರ ಹಾಕುವ ಸಂದರ್ಭದಲ್ಲಿ ತೃತೀಯ ಖಲೀಫರನ್ನು ಭೇಟಿಯಾಗುವ ಭಾಗ್ಯ ನನಗೆ ಲಭಿಸಿತ್ತು. ಅನಂತರ ಮಸ್‌ಜಿದ್ ಉದ್ಘಾಟಿಸುವಾಗ 1982ರಲ್ಲಿ ಚತುರ್ಥ ಖಲೀಫರನ್ನು ಭೇಟಿಯಾಗುವ ಭಾಗ್ಯ ಸಹ ಲಭಿಸಿತು. ಈಗ ಈ ಸಮ್ಮೇಳನದಲ್ಲಿ ಪಂಚಮ ಖಲೀಫರನ್ನು ಭೇಟಿಯಾಗುವ ಭಾಗ್ಯ ಕೂಡ ಲಭಿಸಿದೆ. ನಾನು ಹಝ್ರತ್ ಮಸ್‌ರೂರ್ ಅಹ್ಮದ್ ಸಾಹೇಬರ ಮಾತುಗಳಿಂದ ಬಹಳ ಅನುಗ್ರಹಿಸಲ್ಪಟ್ಟಿದ್ದೇನೆ. ಯುದ್ಧ ಮತ್ತು ಜಗಳ ಮುಕ್ತ ಶಾಂತಿ ಭರಿತ ಸಮಾಜದ ಸ್ಥಾಪನೆ ಬಗ್ಗೆ ಅವರು ಹೇಳಿದ್ದಾರೆ. ರಕ್ಷಣೆಯ ಹೆಸರಲ್ಲಿ ಆಯುಧಗಳಿಗೆ ಮಾನವೀಯತೆಯ ಮೇಲೆ ಆದ್ಯತೆ ನೀಡುವ ಸರಕಾರಗಳನ್ನು ಖಂಡಿಸಿದ್ದಾರೆ. ನ್ಯಾಯಪಾಲನೆ, ಪರಸ್ಪರ ಗೌರವ, ಇವುಗಳನ್ನು ಸ್ಥಾಪಿಸುವ ಇವುಗಳ ಅಸ್ತಿಭಾರ ಹೊಂದಿರುವ ಒಂದು ಸಮಾಜದ ಸ್ಥಾಪನೆಗೆ ವಿವಿಧ ಧರ್ಮಗಳ ಜನರನ್ನು ಒಗ್ಗೂಡಲು ಮಿರ್ಝಾ ಮಸ್‌ರೂರ್ ಅಹ್ಮದ್ ಆಮಂತ್ರಿಸಿದ್ದಾರೆ. ವೈರುದ್ಧ್ಯಗಳಿಂದ ತುಂಬಿದ ಒಂದು ಲೋಕದಲ್ಲಿ ನಾವಿಂದು ಬದುಕುತ್ತಿದ್ದೇವೆ. ಕೆಲವು ದೇಶಗಳು ಪ್ರಗತಿಯ ಉನ್ನತ ಶೃಂಗವನ್ನು ತಲುಪಿವೆ. ಆದರೆ ಜನರ ಬಹಳ ದೊಡ್ಡ ಒಂದು ಸಂಖ್ಯೆ ಹಸಿವು ಮತ್ತು ಬಡತನದಿಂದ ಸಾಯುತ್ತಿವೆ. ಒಂದು ಕಡೆ ಲಕ್ಷಾಂತರ ಟನ್ ಆಹಾರ ಧಾನ್ಯಗಳನ್ನು ನಾವು ಸಮುದ್ರಕ್ಕೆ ಸುರಿಯುತ್ತೇವೆ. ಇನ್ನೊಂದು ಕಡೆ ಕೋಟಿಗಟ್ಟಲೆ ಜನರಿಗೆ ತಿನ್ನಲು ಆಹಾರ ಬಹಳ ಕಷ್ಟದಿಂದ ಸಿಗುತ್ತದೆ. ಒಂದು ಕಡೆ ಕೋಟ್ಯಾಧೀಶರ ಸಂಖ್ಯೆ ವರ್ಧಿಸುತ್ತಾ ಇದೆ. ಇನ್ನೊಂದು ಕಡೆ ಸಮಾಜದ ಇತರ ಕೆಲವು ವರ್ಗಗಳು ಅತ್ಯಂತ ಬಡವರಾಗಿದ್ದಾರೆ. ನಾವು ಎಂತಹ ಲೋಕವನ್ನು ಸ್ಥಾಪಿತವಾಗಬೇಕೆಂದರೆ, ಅದು ಯುದ್ಧವನ್ನು ತ್ಯಜಿಸಬೇಕು. ಶಾಂತಿಯನ್ನು ಬಯಸುವಂತಹದಾಗಬೇಕು. ಎಲ್ಲಾ ಜನರನ್ನು ಜೊತೆ ಸೇರಿಸಿ ಒಗ್ಗೂಡಿಸಬೇಕು. ಅನ್ಯಾಯದ ವಿರುದ್ಧ ಎದ್ದು ನಿಲ್ಲಬೇಕು. ಸಾಮಾಜಿಕ ನ್ಯಾಯವನ್ನು ಬೆಂಬಲಿಸುವಂತಹದಾಗಿರಬೇಕು.

ಒಟ್ಟಿನಲ್ಲಿ ನಾನು ಇಷ್ಟರವರೆಗೆ ಕೆಲವು ವಿವರಣೆಗಳನ್ನು ನಿಮ್ಮ ಮುಂದೆ ಇರಿಸಿದ್ದೇನೆ. ಲೋಕವು ತನ್ನ ಸೃಷ್ಟಿಕರ್ತನ ಕಡೆಗೆ ಮರಳಲಿ ಎಂದು ನಾನು ಅಲ್ಲಾಹನನ್ನು ಬೇಡಿಕೊಳ್ಳುತ್ತೇನೆ. ಲೋಕವು ಅಲ್ಲಾಹನನ್ನು ಗುರುತಿಸುವಂತಾಗಲಿ. ನಮ್ಮ ಮುಂದೆ ಕಾಣಿಸುತ್ತಿರುವ ವಿನಾಶದಿಂದ ಅಲ್ಲಾಹನೇ ನಮ್ಮನ್ನು ರಕ್ಷಿಸಬಲ್ಲನು. ಅದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಸಹ ತನ್ನ ಮಾತುಗಳಲ್ಲೂ ಬರಹಗಳಲ್ಲೂ ಪದೇ ಪದೇ ಎಚ್ಚರಿಕೆ ನೀಡಿದ್ದಾರೆ.

ಅದೂ ಅಲ್ಲದೆ, ಇಂದು ನಾನು ಮತ್ತೊಮ್ಮೆ ಪಾಕಿಸ್ಥಾನದ ಅವಸ್ಥೆಯ ಬಗ್ಗೆ ಪ್ರಾರ್ಥಿಸಬೇಕೆಂದು ಹೇಳಲು ಬಯಸುತ್ತೇನೆ. ಆ ದೇಶವನ್ನು ಕೆಟ್ಟ ಜನರಿಂದ ಅಲ್ಲಾಹನು ರಕ್ಷಿಸಲಿ. ಅಹ್ಮದಿಯರನ್ನೂ ರಕ್ಷಿಸಲಿ. ಶಾಂತಿ ಆಶಿಸುವ ಎಲ್ಲರನ್ನೂ ಅಲ್ಲಾಹನು ರಕ್ಷಿಸಲಿ. ಕಲಹಗಳಿಂದ ದೂರವಿದ್ದು ಶಾಂತಿಯನ್ನು  ಬಯಸುವವರನ್ನೂ. ಅದೇ ರೀತಿ ಸಿರಿಯಾದ ಬಗ್ಗೆ ಸಹ ಪ್ರಾರ್ಥಿಸಿರಿ. ಅಲ್ಲಿ ಸಹ ಅಹ್ಮದಿಯರನ್ನು ಅಲ್ಲಾಹನು ರಕ್ಷಿಸಲಿ. ಒಬ್ಬ ಅಹ್ಮದಿಯನ್ನು ವಿನಾಕಾರಣ ಬಂಧಿಸಲಾಗಿತ್ತು. ಎಲ್ಲ ಅಹ್ಮದಿಯರನ್ನೂ ಅಲ್ಲಾಹನು ರಕ್ಷಿಸಲಿ. ಲೋಕದ ಬಗ್ಗೆ ಸಹ ಪ್ರಾರ್ಥಿಸಿರಿ. ಈಗಿನ ಪರಿಸ್ಥಿತಿಯನ್ನು ನೋಡುವಾಗ ಲೋಕವು ಯುದ್ಧದ ಕಡೆಗೆ ಸಾಗುತ್ತಿರುವಂತೆ ಕಾಣುತ್ತದೆ. ಯುದ್ಧ ಪ್ರಾರಂಭವಾದರೆ ಎಂತಹ ಭಯಾನಕ ಪರಿಣಾಮವುಂಟಾಗುವುದು ಎಂದು ಕೆಲವು ದೊಡ್ಡ ದೇಶಗಳು ತಿಳಿದುಕೊಂಡಿಲ್ಲ. ಲೋಕವು ವಿನಾಶದ ಅಂಚಿನಲ್ಲಿ ನಿಂತಿದೆ. ಅವರಿಗಾಗಿ ನಾವು ಹೆಚ್ಚು ಹೆಚ್ಚಾಗಿ ಪ್ರಾರ್ಥಿಸಬೇಕೆಂಬುದು ನಮ್ಮ ಕರ್ತವ್ಯವಾಗಿದೆ.

--------------*****--------------

**Friday Sermon delivered by Hadrath Khaleefathul Masih Al Khamis[atba]**
at Masjid Baithul Futhuh, London on 07-03-2014

**Note:** Kannada Isha'at Team takes full responsibility for any errors or miscommunication in this Synopsis of the Friday Sermon

**Email**: khutuba.kannada@gmail.com